# ಹೊಸತನದ ಕಷ್ಟ

‘ನವೋದಯ’ ಕಾಲದ ಬಹುಪಾಲು ಕವಿಗಳು ನಾಡಗೀತೆಗಳನ್ನು ರಚಿಸಿದ್ದಾರೆ. ಕನ್ನಡದ ಬಗೆಗಿನ ಅವರ ಸಹಜ ಪ್ರೀತಿ ಮತ್ತು ಕರ್ನಾಟಕ ಏಕೀಕರಣದ ಬಗ್ಗೆ ಅವರ ಕಾಳಜಿ ಅವುಗಳ ರಚನೆಗೆ ಪ್ರಮುಖ ಪ್ರೇರಣೆಯಾಗಿತ್ತು. ನಾನೊಬ್ಬ ಹಾಡುಗಾರನೂ ಆಗಿದ್ದುದರಿಂದ, ನನ್ನ ವಿದ್ಯಾರ್ಥಿದೆಸೆಯಲ್ಲಿ ನಾಡಗೀತೆಗಳನ್ನು ಹಾಡುತ್ತಿದ್ದೆ. ಗಾಯನಸ್ಪರ್ಧೆಗಳಲ್ಲಿ ಬಹುಮಾನಗಳನ್ನೂ ಪಡೆದಿದ್ದೆ. ಅಂದಿನ ಚಲನಚಿತ್ರಗಳಲ್ಲೂ ಸಹ ಉತ್ತಮ ನಾಡಗೀತೆಗಳು ಮೂಡಿ ಬಂದಿದ್ದವು. ಉದಾಹರಣೆಗೆ, ‘ಬಾ ತಾಯಿ ಭಾರತಿಯೇ’, ‘ಕನ್ನಡದ ಕುಲದೇವಿ’, ‘ಹಾಡು ಬಾ ಕೋಗಿಲೆ’ ಮುಂತಾದವು.

‘ನವ್ಯ’ದ ಕಾಲ ಕನ್ನಡ ಗೇಯಗೀತೆಗಳಿಗೆ ಬೀಳುಗಾಲ. ಸಂಗೀತದ ಸಾಹಚರ್ಯದಿಂದ ಅತಿ ಸಾಧಾರಣ ಕವಿತೆಗಳೂ ಜನಮನ್ನಣೆ ಗಳಿಸುತ್ತಿದ್ದುದನ್ನು ಕಂಡು, ಗೋಪಾಲಕೃಷ್ಣ ಅಡಿಗರು, ಕವಿತೆ ಕೇವಲ ತನ್ನ ಕಾವ್ಯಸತ್ವದಿಂದಲೇ ಗೆಲ್ಲಬೇಕೆಂದು ನಿರ್ಧರಿಸಿ, ‘ಹಾಡುಗಬ್ಬ’ದಿಂದ ವಿಮುಖರಾಗಿ ‘ಓದುಗಬ್ಬ’ಕ್ಕೆ ನಿಷ್ಠರಾದರು. ನಾದಾನುಸಾರಿ ಲಯದ ಜಾಗದಲ್ಲಿ ಭಾವಾನುಸಾರಿ ಲಯ ಬಂತು. ಭಾವಕ್ಕಿಂತ ಬುದ್ಧಿ ಪ್ರಧಾನವಾಯಿತು. ಪದ್ಯವು ಗದ್ಯಗಂಧಿಯಾಯಿತು. ಹೀಗಾಗಿ ಗೇಯಗೀತೆಗಳು ಹಿನ್ನೆಲೆಗೆ ಸರಿದವು. ಪರಿಣಾಮವಾಗಿ ನಾಡಗೀತೆಗಳೂ ವಿರಳವಾದವು.

ಈಗಿನ ಬಹುಪಾಲು ಯುವಕವಿಗಳು ‘ನವ್ಯ’ದ ಧಾಟಿಯಲ್ಲಿ ಆಡುಮಾತಿನ ಗದ್ಯಕ್ಕೆ ಹತ್ತಿರವಾದ ಪದ್ಯಗಳನ್ನೇ ಬರೆಯುತ್ತಿರುವುದರಿಂದ, ಅವರಿಗೆ ನಿಯತಲಯ ಮತ್ತು ಛಂದೋಬದ್ಧತೆಯ ಪರಿಚಯವೇ ಇಲ್ಲ. ಹೀಗಾಗಿ ಭಾವಗೀತೆ ಮತ್ತು ನಾಡಗೀತೆಗಳನ್ನು ಬರೆಯಲು ಅವರು ಮುಂದಾಗುತ್ತಿಲ್ಲ.

ನಾನು ನೂರಾರು ಭಾವಗೀತೆಗಳನ್ನು ಬರೆದಿದ್ದೇನಾದರೂ, ಬರೆದ ನಾಡಗೀತೆಗಳು ಕೇವಲ ನಾಲ್ಕು ಮಾತ್ರ. ಇದಕ್ಕೆ ಕಾರಣ, ನಾಡಗೀತೆಯಲ್ಲಿ ಕಾವ್ಯಗುಣ ಮತ್ತು ಹೊಸತನ ತರುವುದು ತುಂಬ ಕಷ್ಟ.

✿

